# ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ
Spl.NDPS 9/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಕೆ. ಅನಿಲ್ ಕುಮಾರ್ | ಪಿ.ಡಬ್ಲ್ಯೂ. | 1 |
| ತಂದೆಯ ಹೆಸರು | ಃ | ಕೆಂಚಪ್ಪ | | |
| ವಯಸ್ಸು | ಃ | 45 ವರ್ಷ | | |
| ಉದ್ಯೋಗ | ಃ | ಹೆಚ್.ಸ 271, ಮಹಿಳಾ ಪೋಲೀಸ್ ಠಾಣೆ, ದಾವಣಗೆರೆ | | |
| ವಾಸ ಸ್ಥಳ | ಃ | ಹರಿಹರ. | | |

ದಿ.12.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಾಯಿಸಲಾಯಿತು.
**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ** ಃ

1. 2016 ರಿಂದ 2023 ಜೂನ್ ತಿಂಗಳವರೆಗೆ ಹರಿಹರದ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ. ಯಾಗಿ ಕೆಲಸ ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ 3ನೇ ಆರೋಪಿಯ ವಿರುದ್ಧ ಈ ನ್ಯಾಯಾಲಯವು ಉದ್ಘೋಷಣೆ ವಾರೆಂಟನ್ನು ಹೊರಡಿಸಿದ್ದು, ನಮ್ಮ ಹರಿಹರ ಗ್ರಾಮಾಂತರ ಪೋಲೀಸ್ ಠಾಣೆಯ ಪಿ.ಎಸ್.ಐ. ರವರು ಸದರಿ ವಾರೆಂಟನ್ನು ಜಾರಿ ಮಾಡಲು ನನಗೆ ಆದೇಶಿಸಿದ್ದರು.

2. ಅದರಂತೆ ದಿ.12.12.2022 ರಂದು ಭದ್ರಾವತಿ ನಗರದ, ಕೆ.ಇ.ಬಿ. ಕ್ವಾಟ್ರಸ್ ಹತ್ತಿರ, ಪೇಪರ್ ಟೌನ್ ಬಡಾವಣೆಯ ಬಳಿ, ಗಣೇಶ ದೇವಸ್ಥಾನದ ಹತ್ತಿರ ನ್ಯಾಯಾಲಯದ ಆದೇಶದಂತೆ ಈ ಪ್ರಕರಣದಲ್ಲಿ ಆರೋಪಿ-3 ಪ್ರಮೋದ್ ಲೇಟ್ ನಾಗರಾಜ ಇವರ ಉದ್ಘೋಷಣೆಯನ್ನು ಪಂಚರಾಗಿ ಸ್ಥಳೀಯ ನಿವಾಸಿಗಳಾದ ಅನಿಲ್ ಮತ್ತು ಮಹೇಶ್ ಇವರುಗಳನ್ನು ಕರೆದು ಸದರಿ ಪ್ರಕರಣದ ವಿಚಾರವನ್ನು ತಿಳಿಸಿ, ಆರೋಪಿ-3 ರ ವಿಳಾಸಕ್ಕೆ ಕರೆದುಕೊಂಡು ಹೋಗಿ ಮತ್ತು 3ನೇ ಆರೋಪಿಯು ವಾಸ ಮಾಡುವ ಪ್ರದೇಶದಲ್ಲಿ ಸಹ ಅವರನ್ನು ಕರೆದುಕೊಂಡು ಹೋಗಿ, ಆರೋಪಿಯ ಬಗ್ಗೆ ಮಾಹಿತಿ ಕಲೆ ಹಾಕಿ, ಸದರಿ ಪ್ರದೇಶದಲ್ಲಿ ಟಾಮ್ ಟಾಮ್ ಹೊಡೆಸಿ, ಸದರಿ ಆರೋಪಿಯು ಯಾರಿಗಾದರೂ ಪತ್ತೆಯಾದಲ್ಲಿ ಒಂದು

ತಿಂಗಳ ಒಳಗಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದು ತಿಳಿಸಲಾಯಿತು.

3. ಉದ್ಘೋಷಣೆಯ ಪ್ರತಿಯನ್ನು ಆರೋಪಿಯ ಮನೆಯ ಬಾಗಿಲಿಗೆ, ಸ್ಥಳೀಯ ಹೋಟೆಲ್ ಮುಂದೆ, ದೇವಸ್ಥಾನ ಮತ್ತು ಅಂಗನವಾಡಿಯ ಮುಂದೆ ಅಂಟಿಸಲಾಯಿತು. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇನೆ.

4. ನ್ಯಾಯಾಲಯದಿಂದ ಕಳುಹಿಸಿದ್ದ ಉದ್ಘೋಷಣೆಯ ವಾರೆಂಟನ್ನು **ನಿಪಿ-1** ಎಂದು, ಪಂಚನಾಮೆಯನ್ನು **ನಿಪಿ-2** ಎಂದು, ಮೂರು ಫೋಟೋಗಳನ್ನು **ನಿಪಿ-3 ರಿಂದ ನಿಪಿ-5** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u> : ಪ್ರಸ್ತುತ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.